ದಿನಾಂಕ 01.07.2025 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

ಪಾಟಿ ಸವಾಲು ಪ್ರತಿವಾದಿ ಪರ ಶ್ರೀ ಎನ್.ಜಿ.ಪಿ. ವಕೀಲರಿಂದಃ-

1. ನನ್ನ ವಾದ ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಗೊತ್ತು. ವಾದಪತ್ರವನ್ನು ಬರೆಯಲು ಮಾಹಿತಿಯನ್ನು ನಾನೇ ಖುದ್ದು ನೀಡಿರುತ್ತೇನೆ. ನಾನು ವಾದ ಪತ್ರದಲ್ಲಿ ಪ್ರತಿವಾದಿಗಳು ನನಗೆ ಹಿಂಸೆ ಕೊಡುತ್ತಿದ್ದು , ದಾವಾ ಆಸ್ತಿಯಲ್ಲಿ ಗಲಾಟೆ ಮಾಡುತ್ತಿದ್ದಾರೆ ಎಂದು ದಾವೆ ಹಾಕಿರುತ್ತೇನೆ. 1 ನೇ ಪ್ರತಿವಾದಿಯು ಈಗ ಮರಣ ಹೊಂದಿರುತ್ತಾನೆ. ಯಾವಾಗ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ಸುಮಾರು ದಿವಸಗಳ ಹಿಂದೆ ಮರಣ ಹೊಂದಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ದಾವಾ ಆಸ್ತಿಯ ಮುನ್ಸಿಪಲ್ ಅಸೆಸ್ ಮೆಂಟ್ ನಂ 27/1 , 27/1 , 25/1 ಆಗಿರುತ್ತದೆ. ದಾವಾ ಆಸ್ತಿಯು ಮೂಲತಃ 116 ಅಡಿ ಉದ್ದ , 13 ಅಡಿ ಅಗಲ ಇರುತ್ತದೆ. 116 ಅಡಿ ಉದ್ದ , 13 ಅಡಿ ಅಗಲದ ದಾವಾ ಆಸ್ತಿಯು ಮೂಲತಃ 1 ನೇ ಪ್ರತಿವಾದಿಗೆ ಸೇರಿದ್ದಾಗಿರುತ್ತದೆ. 1 ನೇ ಪ್ರತಿವಾದಿಗೆ ಸದರಿ ಆಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಮೂಲತಃ 1 ನೇ ಪ್ರತಿವಾದಿಯ ತಂದೆಗೆ ಸೇರಿದ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಯವರು ಸದರಿ ಸ್ವತ್ತು ನಮ್ಮ ಸ್ವಂತ ಆಸ್ತಿ ಎಂದು ಹೇಳಿ ನನಗೆ ಮಾರಾಟ ಮಾಡಿರುತ್ತಾರೆ.

2. ಪ್ರತಿವಾದಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಸದರಿಯವರ ಮಕ್ಕಳು ಜಮೀನನ್ನು ನಮಗೆ ಮಾರಾಟ ಮಾಡಿದಾಗ ಮಕ್ಕಳು ಚಿಕ್ಕವರಿದ್ದರು ಎಂದು ನುಡಿಯುತ್ತಾರೆ. 2 ರಿಂದ 6 ನೇ ಪ್ರತಿವಾದಿಗಳು 1 ನೇ ಪ್ರತಿವಾದಿ ನಾಮದೇವಪ್ಪನ ಮಕ್ಕಳು ಎಂದರೆ ಸರಿ. 2000 ರಲ್ಲಿ ದಾವಾಆಸ್ತಿಯನ್ನು ಖರೀದಿ ಮಾಡುವಾಗ ನಾನು 1 ನೇ ಪ್ರತಿವಾದಿಯ ವಂಶವೃಕ್ಷವನ್ನು ಪರಿಶೀಲಿಸಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ನಾನು ಯಾವ ದಿನಾಂಕದಂದು 1 ನೇ ಪ್ರತಿವಾದಿಯ ವಂಶವೃಕ್ಷವನ್ನು ಪರಿಶೀಲಿಸಿದ್ದೇನೆ ಎಂದರೆ ಸಾಕ್ಷಿಯು ಖರೀದಿಸುವ ಪೂರ್ವದಲ್ಲಿ ಎಲ್ಲಾ ದಾಖಲೆಗಳನ್ನು ಪರೀಶೀಲಿಸುವಾಗ ವಂಶವೃಕ್ಷವನ್ನುಪರಿಶೀಲಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾಖಲೆಗಳ ಪ್ರಕಾರ ದಾವಾ ಸ್ವತ್ತು 2 ರಿಂದ 6 ನೇ ಪ್ರತಿವಾದಿಗಳಿಗೆ

ಪಿತ್ರಾರ್ಜಿತ ಸ್ವತ್ತಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಸ್ವತ್ತು 1 ನೇ ಪ್ರತಿವಾದಿಯು ನಮಗೆ ತಮ್ಮ ಸ್ವಂತ ಸ್ವತ್ತು ಎಂದು ಹೇಳಿ ಮಾರಾಟ ಮಾಡಿರುತ್ತಾರೆ. ದಾವಾ ಸ್ವತ್ತು 1 ನೇ ಪ್ರತಿವಾದಿಗೆ ಅವರ ತಂದೆ ಮೂಲಕ ಬಂದಿರುತ್ತದೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯು ನಾವು ಕೇಳಿದಾಗ ದಾವಾ ಸ್ವತ್ತು ತನ್ನ ಸ್ವಂತ ಸ್ವತ್ತು ಎಂದು ಹೇಳಿರುತ್ತಾರೆ. ನಾವು 1 ನೇ ಪ್ರತಿವಾದಿಯ ವಂಶವೃಕ್ಷವನ್ನು ಪರಿಶೀಲಿಸದೇ ಕ್ರಯಪತ್ರಕ್ಕೆ 2 ರಿಂದ 6 ನೇ ಪ್ರತಿವಾದಿಗಳನ್ನು ಪಕ್ಷಗಾರರನ್ನಾಗಿಸದೇ 1 ನೇ ಪ್ರತಿವಾದಿಯಿಂದ ದಾವಾ ಸ್ವತ್ತಿಗೆ ಸಂಬಂಧಿಸಿದ ಕ್ರಯಪತ್ರವನ್ನು ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಖರೀದಿ ಪತ್ರಕ್ಕೆ ನಾವು 1 ನೇ ಪ್ರತಿವಾದಿಯ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇವೆಯೇ ಎಂದರೆ ಸಾಕ್ಷಿಯು ಎಲ್ಲರೂ ಹಾಜರಿರುತ್ತಾರೆ ಎಂದು ನುಡಿಯುತ್ತಾರೆ.

3. ನಿಪಿ 2 ರ ಕ್ರಯಪತ್ರದಲ್ಲಿ 1 ನೇ ಪ್ರತಿವಾದಿಯು 2 ರಿಂದ 6 ನೇ ಪ್ರತಿವಾದಿಗಳು ಅಪ್ರಾಪ್ತ ಇದ್ದ ಕಾರಣ ಅವರ ಪರವಾಗಿ ಕ್ರಯಪತ್ರವನ್ನು ಬರೆದುಕೊಡುತ್ತಿದ್ದೇನೆ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ಸದರಿ ಸಮಯದಲ್ಲಿ 2 ರಿಂದ 6 ನೇ ಪ್ರತಿವಾದಿಗಳು ಅಪ್ರಾಪ್ತರಾಗಿದ್ದರು ಎಂದು ನುಡಿಯುತ್ತಾರೆ. ನಿಪಿ 2 ರ ಕ್ರಯಪತ್ರದಲಿ 1 ನೇ ಪ್ರತಿವಾದಿಯ ಮಕ್ಕಳಾದ 2 ರಿಂದ 6 ನೇ ಪ್ರತಿವಾದಿಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ.

4. 1 ನೇ ಪ್ರತಿವಾದಿಯ ಮಕ್ಕಳಿಗೆ ದಾವಾ ಆಸ್ತಿಯ ಮೇಲಿರುವ ಹಕ್ಕನ್ನು ತಪ್ಪಿಸುವ ಉದ್ದೇಶದಿಂದ ನಾನು ಮತ್ತು 1 ನೇ ಪ್ರತಿವಾದಿ ಶಾಮೀಲಾಗಿ ನಿಪಿ 2 ರಂತೆ ಕ್ರಯಪತ್ರವನ್ನು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. 2 ರಿಂದ 7 ನೇ ಪ್ರತಿವಾದಿಗಳು ದಾವಾ ಸ್ವತ್ತಿನ ಮಾಲೀಕರು ಮತ್ತು ಹಕ್ಕುದಾರರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿ ಮಾತ್ರ ದಾವಾ ಸ್ವತ್ತಿನ ಹಕ್ಕುದಾರರು ಮತ್ತು ಮಾಲೀಕರು ಎಂದು ನುಡಿಯುತ್ತಾರೆ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ರಿಂದ 7 ನೇ ಪ್ರತಿವಾದಿಗಳು 1 ನೇ ಪ್ರತಿವಾದಿಯ ಮಕ್ಕಳು ಇರಬಹುದು.

5. 2 ರಿಂದ 7 ನೇ ಪ್ರತಿವಾದಿಗಳು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಇನ್ನೊಂದು ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪಾಲು ಕೇಳಿ 2 ರಿಂದ 7 ನೇ ಪ್ರತಿವಾದಿಗಳು ನನ್ನನ್ನು ಪಕ್ಷಗಾರರನ್ನಾಗಿಸಿ ಇನ್ನೊಂದು ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ 1 ನೇ ಪ್ರತಿವಾದಿಯನ್ನು ಸಹಾ ಪ್ರತಿವಾದಿ ಯನ್ನಾಗಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನನಗೆ ದಾವಾ ಆಸ್ತಿಯನ್ನು ಬರೆದುಕೊಟ್ಟ ಕ್ರಯಪತ್ರವನ್ನು ಅಸಿಂಧುಗೊಳಿಸುವಂತೆ ಕೋರಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ 2 ರಿಂದ 7 ನೇ ಪ್ರತಿವಾದಿಗಳು 1 ನೇ ಪ್ರತಿವಾದಿಯು ದಾವಾ ಆಸ್ತಿಗೆ ಸಂಬಂದಿಂ,ಸಿ ನನಗೆ ಬರೆದುಕೊಟ್ಟ ಕ್ರಯಪತ್ರವು ಅವರ ಹಕ್ಕಿಗೆ ಬದ್ಧಪಡಿಸುವುದಿಲ್ಲ ಎಂದು ಕೋರಿ ಪರಿಹಾರ ಕೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ಚಾಲ್ತಿಯಲ್ಲಿದೆ ಎಂದರೆ ಸರಿ. ಸದರಿ ದಾವೆಯಲ್ಲಿ ದಾವಾ ಆಸ್ತಿಯನ್ನು ಮಾರಾಟ ಮಾಡದಂತೆ ನನ್ನ ವಿರುದ್ಧ ತಾತ್ಕಾಲಿಕ ತಡೆಯಾಜ್ಞೆ ಇದೆ ಎಂದರೆ ಸರಿ.

6. ನಿಪಿ 2 ರ ಕ್ರಯಪತ್ರವನ್ನು 2 ರಿಂದ 7 ನೇ ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು 1 ನೇ ಪ್ರತಿವಾದಿ ಶಾಮೀಲಾಗಿ ಸೃಷ್ಠಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಯಾವುದೇ ಘೋಷಣಾತ್ಮಕ ಪರಿಹಾರವನ್ನು ಕೇಳಿರುವುದಿಲ್ಲ. ಪ್ರತಿವಾದಿಗಳು ವಾದ ಪತ್ರದಲ್ಲಿ ಏನು ತಕರಾರು ಸಲ್ಲಿಸಿರುತ್ತಾರೆ ಎಂದು ಗೊತ್ತು . ಸದರಿ ತಕರಾರಿನಲ್ಲಿ ಪ್ರತಿವಾದಿಗಳು 1 ನೇ ಪ್ರತಿವಾದಿಯು ನನಗೆ ದಾವಾ ಆಸ್ತಿಯನ್ನು ಮಾರಿದ್ದು ನನ್ನಿಂದ ದಾವಾ ಆಸ್ತಿಯನ್ನು ವಾಪಾಸ್ಸು ಪಡೆಯುವಂತೆ ಕೋರಿರುತ್ತಾರೆ. ದಿನಾಂಕ 11.05.2000 ರಂದು 1 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ವಿಚಾರವು ತಿಳಿದಿದ್ದರೂ ಸಹಾ 2 ರಿಂದ 7 ನೇ ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ 2 ರ ಕ್ರಯಪತ್ರವನ್ನು ಸೃಷ್ಠಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ದಾವಾ ಆಸ್ತಿಯಲ್ಲಿ ನನಗೆ ಮಾರಿದ ಆಸ್ತಿಯನ್ನು ಹೊರತುಪಡಿಸಿ ಇನ್ನು ಎಷ್ಟು ವಿಸ್ತೀರ್ಣದ ಜಾಗ ಉಳಿದಿದೆ ಎಂದರೆ ಸಾಕ್ಷಿಯು 113 ಅಡಿ ಉದ್ದದ 13 ಅಡಿ ಅಗಲದ ಆಸ್ತಿಯಲ್ಲಿ ನನಗೆ 20 ಅಡಿ ಉದ್ದ , 13 ಅಡಿ ಅಗಲದ ಆಸ್ತಿಯನ್ನು ಮಾರಾಟ

ಮಾಡಿರುತ್ತಾರೆ. 2 ರಿಂದ 7 ನೇ ಪ್ರತಿವಾದಿಗಳು ನಾನು ಈ ದಾವೆಯನ್ನು ದಾಖಲಿಸುವ ಪೂರ್ವದಲ್ಲಿಯೇ ಅಸಲು ದಾವೆ ನಂ 115/2016 ಹಿಸ್ಸೆಯನ್ನು ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ನನ್ನ ವಿರುದ್ಧ ಹೂಡಿದ ದಾವೆಗೆ ಪ್ರತಿಕಾರವಾಗಿ ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ 2 ರಿಂದ 7 ನೇ ಪ್ರತಿವಾದಿಗಳು ನನ್ನ ಮೇಲೆ ಹಲ್ಲೆ ಮಾಡಿರುವ ಕಾರಣ ನಾನು ದಾವೆಯನ್ನು ಸಲ್ಲಿಸಿರುತ್ತೇನೆ. 2 ರಿಂದ 7 ನೇ ಪ್ರತಿವಾದಿಗಳ ಪೈಕಿ 4 ಜನ ಹೆಣ್ಣು ಮಕ್ಕಳು ಎಂದರೆ ಸಾಕ್ಷಿಯು ಅವರಲ್ಲಿಇಬ್ಬರು ಗಂಡು ಮಕ್ಕಳು ಸಹಾ ಇರುತ್ತಾರೆಂದು ನುಡಿಯುತ್ತಾರೆ. 2 , 3 ,4 ಪ್ರತಿವಾದಿಗಳಿಗೆ 2015 ರಲ್ಲಿ ಎಷ್ಟು ವರ್ಷ ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. 2017 ರ ಪೂರ್ವದಲ್ಲಿ 2 ರಿಂದ 7 ನೇ ಪ್ರತಿವಾದಿಗಳ ಪೈಕಿ ಯಾರಿಗೆ ವಿವಾಹ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಿನಾಂಕ 18.09.2017 ರಂದು ಪ್ರತಿವಾದಿಗಳು ದಾವಾ ಆಸ್ತಿಗೆ ಬಂದು ನನ್ನ ಸ್ವಾಧೀನಕ್ಕೆ ಅಡ್ಡಿಪಡಿಸಿರುತ್ತಾರೆ. ಸದರಿ ಸಮಯದಲ್ಲಿ ಎಷಟ್ಟು ಜನರು ಇದ್ದರು ಎಂದರೆ ಸಾಕ್ಷಿಯು ಸುಮಾರು ಜನರು ಇದ್ದರು ಎಂದು ನುಡಿಯುತ್ತಾರೆ. ನನ್ನ ದಾವೆಯಲ್ಲಿ ನಿಖರವಾಗಿ ಯಾರು ದಾವಾ ಆಸ್ತಿಯನ್ನು ಕೆಡವುತ್ತೇವೆ ಎಂದು ಬೆದರಿಕೆ ಹಾಕಿದ್ದರು ಎಯಿ ನಾನು ನಿಖರವಾಗಿ ಹೇಳಲು ಆಗುವುದಿಲ್ಲ. ನಾನು ಪ್ರತಿಡವಾದಿಯರು ದಾವಾ ಆಸ್ತಿಯ ಸ್ವಾಧೀನಾನುಭವಕ್ಕೆ ಅಡ್ಡಿಪಡಿಸಿದಾಗ ದೂರು ದಾಖಲಿಸಿರುತ್ತೇನೆ. ಆದರೆ ಪೋಲೀಸರು ಇದು ಸಿವಿಲ್ ಸ್ವರೂಪದ್ದಾಗಿರುವುದರಿಂದ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ. ಸದರಿ ಸಮಯದಲ್ಲಿ ಪೋಲೀಸರು ನನಗೆ ಯಾವುದೇ ಹಿಂಬರಹವನ್ನು ನೀಡಿರುವುದಿಲ್ಲ.

ದಿನಾಂಕ 18-9-2017 ರಂದು ದಾವಾ ಆಸ್ತಿಗೆ ಸಂಬಂಧಿಸಿ ಪ್ರತಿವಾದಿಯರು ನನ್ನ ಸ್ವಾಧೀನಾನುಭವಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಘಟನೆಗೆ ಸಂಬಂಧಿಸಿ ನಾನು ದೂರನ್ನು ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ವಾದಪತ್ರದಲ್ಲಿ ಆಗಲೀ ಮುಖ್ಯ ವಿಚಾರಣೆಯ ಪತ್ರದಲ್ಲಾಗಲೀ ಪೋಲೀಸರಿಗೆ ದೂರನ್ನು ನೀಡಿರುವಬಗ್ಗೆ ಬರೆದಿಲ್ಲ ಎಂದರೆ ಸಾಕ್ಷಿಯು ನಾನು ಪೋಲೀಸರು ನ್ಯಾಯಾಲಯಕ್ಕೆ ಹೋಗುವಂತೆ ಹೇಳಿದ್ದರಿಂದ ಬ ಬಂದಿರುತ್ತೇನೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯಲ್ಲಿ ಕಟ್ಟಿರುವ ಆಸ್ತಿಯು ದುಸ್ಥಿತಿಯಲ್ಲಿದ್ದು ೀಳುವ ಸಂಭವ ಇರುತ್ತದೆ ಎಂದು ನಾನು ದಾವೆಯನ್ನು ದಾಖಲಿಸಿರುತ್ತೇನೆ. ದಾವೆ ಸಲ್ಲಿಸಲು ದಾವಾ ಕಾರಣ ಯಾವಾಗ ಸೃಷಿ ಆಗಿರುತ್ತದೆವ ಂದರೆ ಸಾಕ್ಷಿಯಿು ಪ್ರತಿವಾದಿಗಳು ದಾವಾ ಆಸ್ತಿಗೆ ನನ್ನನ್ನು ಅಡ್ಡಿಪಡಿಸಿದ್ದರಿಂದ ವ್ಯಾಜ್ಯ ಕಾರಣ ಉಂಟಾಗುತ್ತದೆ ಎಂದು ಹೇಳುತ್ತಾರೆ. 2 ರಿಂದ ನೇ ಪ್ರತಿವಾದಿಗಳು ಸಂಪೂರ್ಣ ಮಾಲೀಕರು , ಹಕ್ಕುದಾರರು ಮತ್ತು ಸ್ವಾಧೀನದಾರರು ಎಂದರೆ ಸರಿಯಲ್ಲ. ನಿಪಿ 2 ಕ್ರಯಪತ್ರವು ಸೃಷ್ಠಿ ಮಾಡಿದ ಕ್ರಯಪತ್ರ ಆಗಿದ್ದು ಸದರಿ ಕ್ರಯಪತ್ರದಂತೆ ನನಗೆ ಯಾವುದೇಕಾನೂನುರೀತಿಯ ಹಕ್ಕು ದಾವಾ ಆಸ್ತಿಯ ಮೇಲೆ ಪ್ರಾಪ್ತವಾಗುವುದಿಲ್ಲ ಎಂದರೆ ಸರಿಯಲ್ಲ. 2 ರಿಂದ 7 ನೇ ಪ್ರತಿವಾದಿಗಳು ನನಗೆ ಯಾವುದೇ ಕ್ರಯಪತ್ರವನ್ನು ದಾವಾ ಆಸ್ತಿಗೆ ಸಂಬಂಧಿಸಿ ಬರೆದುಕೊಡದ ಕಾರಣ ನನಗೆ ದಾವಾ ಆಸ್ತಿಯ ಮೇಲೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಕಾನೂನು ಸಲಹೆಗಾರರ ಸಲಹೆಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ನಾನು 2 ರಿಂದ 7 ನೇ ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಈ ದಾವೆಯನ್ನು ದಾಖಲಿಸಿದ್ದು ಕ್ರಯಪತ್ರದಂತೆ ನನಗೆ ಯಾವುದೇ ಹಕ್ಕು ದಾಖಲಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ರ ಕ್ರಯಪತ್ರದಂತೆ ಮುನ್ಸಿಪಾಲಿಟಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ಖಾತೆಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಓ.ಹೇ.ಕೇ.ಸರಿಯಿದೆ.

(ಮರು ವಿಚಾರಣೆ ಇಲ್ಲ)

(ತೆ.ನ್ಯಾ.ಸಾ.ಹೇ.ಬೆ.ಮಾಡಲಾಯಿತು). 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಶಿಕಾರಿಪುರ.